ಚಿಂತಾಮಣಿ ತಾಲ್ಲೂಕಿನಲ್ಲಿ ನಾಲಾ ಕಾಮಗಾರಿ ಕೆಲಸ.

1468. ಶ್ರೀ ಚೌಡರೆಡ್ಡಿ (ಚಿಂತಾಮಣಿ) :– ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ (1) ಕೋಟಗಲ್ ಕೆರೆಯಿಂದ ಕೆಂಚರ್‌ಲಹಳ್ಳಿ ಕೆರೆ (2) ಮಿಂಡಿಗಲ್ ವಡ್ಡುವಿನಿಂದ ಸೀತಾರಾಮಪುರ ಗುಂಡಿಗೆರೆಗಳ ನಾಲಾ ಕಾಮಗಾರಿಗಳಿಗೆ ಡಿ.ಪಿ.ಎ.ಪಿ.ನಲ್ಲಿ ಖರ್ಚಾದ ಹಣದ ಮೊತ್ತವೆಷ್ಟು ;

ಆ) ನಾಲಾ ಕಾಮಗಾರಿ ಕೆಲಸಗಳು ಪೂರ್ಣಗೊಳ್ಳದೆ ನೀಗಾವರಿಗೆ ಸಾಕಷ್ಟು ನೀರು ದೊರಕದೆ
1) ಕೆಂಚಾರ್ ಲಹಳ್ಳಿ ಕೆರೆ
2) ಸೀತಾರಾಮಪುರ ಗುಂಡಿಕೆರೆ ಅಚ್ಕಟ್‌ದಾರರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಈ ಕೆಲಸಗಳು ಎಂದಿನಿಂದ ಬಾಕಿ ಉಳಿದಿದೆ ಮತ್ತು ಸರ್ಕಾರವು ಈ ಕೆಲಸಗಳನ್ನು ಪೂರ್ಣಗೊಳಿಸಲು ಇಚ್ಛಿಸಿದೆಯೇ ಅಥವಾ ಇಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) –

ಅ) ಡಿ.ಪಿ.ಎ.ಪಿ. ಯೋಜನೆಯಲ್ಲಿ ಇಲ್ಲಿಯ ತನಕ ಈ ಕೆಳಕಂಡ ನಾಲೆಗಳಲ್ಲಿ ಖರ್ಚು ಮಾಡಿರುವ ವಿವರ.
ಅ) ತೋಟಗಲ್ ಕೆರೆಯಿಂದ ಕೆಂಚಾರ್‌ಲಹಳ್ಳಿ ಕೆರೆ ..... ರೂ. 4,04,850
ಆ) ಮಿಂಡಿಗಲ್ ವಡ್ಡುವಿನಿಂದ ಸೀತಾರಾಮಪುರ ಗುಂಡಿ ಕೆರೆ .. ರೂ. 11,46,680

ಆ) ಹೌದು

ಇ) (1) ಕೆಂಚಾರ್‌ಲಹಳ್ಳಿ ಕೆರೆ ಮತ್ತು (2) ಮಿಂಡಿಗಲ್ ವಡ್ಡು ಕಾಮಗಾರಿಗಳು 1986 ರಿಂದ ಉಳಿಕೆ ಇದೆ. ಕೇಂದ್ರ ಸರ್ಕಾರದ ಹೊಸ ಮಾರ್ಗಸೂಚಿಯನ್ವಯ ಬರಗಾಲ ಪೀಡಿತ ಪ್ರದೇಶದ ಕಾರ್ಯಕ್ರಮದ ಅಡಿಯಲ್ಲಿ ಈ ಕಾಮಗಾರಿಗಳನ್ನು ಮಾಡಲು ಅವಕಾಶವಿರುವುದಿಲ್ಲ. ಆದಾಗ್ಯೂ ಕೋಲಾರ ಜಿಲ್ಲಾ ಪರಿಷತ್ತು 1992–93 ರ ಸಾಲಿನ ಬಜೆಟ್‌ನಲ್ಲಿ ಸೇರಿಸಿಕೊಂಡು ಕ್ರಮಸಂಖ್ಯೆ 1 ರ ಕಾಮಗಾರಿ ಮತ್ತು ನ್ಯಾಯಾಲಯದ ತಡೆ ಆಜ್ಞೆ ಇರುವ ಪ್ರದೇಶವನ್ನು ವಿರಹಿತ ಪಡಿಸಿ, ಕ್ರಮಸಂಖ್ಯೆ 2 ರ ಕಾಮಗಾರಿಗಳನ್ನು 1992–93 ರ ಸಾಲಿನಲ್ಲಿ ಪೂರ್ಣಗೊಳಿಸುವುದು.

ಮಾನ್ವಿ ತಾಲ್ಲೂಕಿನಲ್ಲಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ.

1105. ಶ್ರೀ ಬಸವನಗೌಡ ಪಾಟೀಲ (ಮಾನ್ವಿ) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಮಾನ್ವಿ ತಾಲ್ಲೂಕಿನಲ್ಲಿ ಎಷ್ಟು ಏತ ನೀರಾವರಿ ಯೋಜನೆಗಳು ಕಾರ್ಯ ಪ್ರಾರಂಭಿಸಿವೆ ;

ಆ) ಅವುಗಳಲ್ಲಿ ಈಗ ಕಾರ್ಯ ನಿರ್ವಹಿಸುತ್ತಿರುವ ಏತ ನೀರಾವರಿ ಯೋಜನೆಗಳೆಷ್ಟು ;

ಇ) 1991–92ನೇ ಸಾಲಿನಲ್ಲಿ ತೆಗೆದುಕೊಳ್ಳುವ ಏತ ನೀರಾವರಿ ಯೋಜನೆಗಳೆಷ್ಟು ಹಾಗೂ ಏತ ನೀರಾವರಿ ಯೋಜನೆ ತೆಗೆದುಕೊಳ್ಳಲು ಸರ್ಕಾರಕ್ಕೆ ಆಸಕ್ತಿ ಇದೆಯೇ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ಸಚಿವರು) –

ಅ) ಒಂದು.

ಆ) ಒಂದು.

ಇ) ಐದು.

ಈ) ಹೌದು.